## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 70 (237)
2. ಮಾನ್ಯ ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
3. ಉತ್ತರಿಸಬೇಕಾದ ದಿನಾಂಕ: : 16-07-2019
4. ಉತ್ತರಿಸಬೇಕಾದ ಸಚಿವರು : ವೈದ್ಯಕೀಯ ಶಿಕ್ಷಣ ಸಚಿವರು

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೀದರ್ ಮೆಡಿಕಲ್ ಕಾಲೇಜಿನ ಬೋಧಕ ಆಸ್ಪತ್ರೆಯ ಕಟ್ಟಡದ ಒಂದು ಭಾಗ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಸಂಬಂಧಿಸಿದ ಗುತ್ತಿಗೆದಾರರು, ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಹೌದು.<br><br>ದಿನಾಂಕ: 08.06.2018 ರಂದು ಬ್ರಿಮ್ಸ್ ಬೋಧಕ ಆಸ್ಪತ್ರೆಯ ಗೇಟ್ ನಂ.01ರ ಮೇಲ್ಛಾವಣಿ (Wall of Portico) ಕುಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೀದರ್ ಇವರಿಗೆ ದಿನಾಂಕ: 08.07.2019 ರಂದು ಪತ್ರ ಬರೆದು ಖುದ್ದು ಸ್ಥಳ ತನಿಖೆ ಮಾಡಿ ಆಸ್ಪತ್ರೆಯ ಕಳಪೆ ಕಾಮಾಗಾರಿ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಕೋರಲಾಗಿದೆ.<br><br>ಮುಂದುವರೆದು, ಬೀದರ್ ನ ಆಸ್ಪತ್ರೆ ಕಟ್ಟಡ ಕುಸಿದಿರುವ ಬಗ್ಗೆ ಸಮಗ್ರ ತನಿಖೆ ನಡೆಸಲು 05 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿ, 15 ದಿನಗಳೊಳಗಾಗಿ ವರದಿ ಸಲ್ಲಿಸುವಂತೆ ದಿನಾಂಕ: 12.07.2019 ರಂದು ಅಧಿಸೂಚನೆ ಹೊರಡಿಸಲಾಗಿದೆ.<br><br>ಸಂಸ್ಥೆಯ ವತಿಯಿಂದ ಸಂಬಂಧಪಟ್ಟ ಗುತ್ತಿಗೆದಾರರಿಗೂ ಸಹ ನೋಟೀಸ್ ನೀಡಲಾಗಿದೆ. |
| ಆ) | ಬೀದರ್ ಮೆಡಿಕಲ್ ಕಾಲೇಜಿಗೆ ಈಗಿರುವ 150 ಸೀಟುಗಳ ಪೈಕಿ 50 ಸೀಟುಗಳನ್ನು ಕಡಿತ ಮಾಡುವ ಕುರಿತು ಭಾರತೀಯ ವೈದ್ಯಕೀಯ ಪರಿಷತ್ತು ಪತ್ರ ಬರೆದಿರುವುದು ನಿಜವೇ? ಬರೆದಿದ್ದಲ್ಲಿ, ಪತ್ರದ ಪ್ರತಿ ಒದಗಿಸುವುದು? | ಹೌದು. ಪತ್ರದ ಪ್ರತಿ ಲಗತ್ತಿಸಿದೆ.<br><br>ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:25241-42/2019 ರಲ್ಲಿ ದಿನಾಂಕ 03.07.2019 ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ 2019-20 ನೇ ಸಾಲಿನಲ್ಲಿ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಎಂಬಿಬಿಎಸ್ ಕೋರ್ಸಿನ 150 ಸೀಟುಗಳ ಪ್ರವೇಶಾತಿಗೆ ಅನುಮತಿ ನೀಡಿರುತ್ತದೆ. |
| ಇ) | ಭಾರತೀಯ ವೈದ್ಯಕೀಯ ಪರಿಷತ್ತು ಗುರುತಿಸಿರುವ ಕೊರತೆಗಳನ್ನು ನೀಗಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ವಿವರ ನೀಡುವುದು) | ಭಾರತೀಯ ವೈದ್ಯಕೀಯ ಪರಿಷತ್ತು ಗುರುತಿಸಿರುವ ಕೊರತೆಗಳನ್ನು ನೀಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ..<br>1. Diaster Trolley is made available in the causality.<br>2. CSSD ETO sterilizer installed and is working.<br>3. Intercom facility made available in old hospital an college building and being procured for new hospital building. |

| | | |
|---|---|---|
| | | 4. Hospital Lecture Theater of capacity 150 made available.<br>5. New doctors are being appointed als department promotions are being made.<br>6. Necessary facilities like nursing staffs are available (Total 355 available)<br>7. All required Investigations are made available and Bed occupancy is being improved. |

ಸಂಖ್ಯೆ: MED 48 ಎಂಪಿಎಸ್ 2019

(ಇ.ತುಕಾರಾಂ)
ವೈದ್ಯಕೀಯ ಶಿಕ್ಷಣ ಸಚಿವರು